ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ.

CHIKKABALLAPURA URBAN DEVELOPMENT AUTHORITY.

ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್, ತುಮಕಲಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ-262101.

Sitrus City Meadows, 4th Sector, Tumakalahalli Village, B.B.Road, Chikkaballapur-562 101.

ದೂರವಾಣಿ ಸಂಖ್ಯೆ:08156-274501.

Email ID:cuda.cbpur@gmail.com

ಸಂಖ್ಯೆ:ಚಿ.ನ.ಅ.ಪ್ರಾ/ವಿನ್ಯಾಸ/37A/2024-25/1286 ದಿನಾಂಕ: 29 NOV 2024

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ"

(ವಿನ್ಯಾಸ ಅಭಿವೃದ್ಧಿಪಡಿಸಲು ಮಾತ್ರ)

**ವಿಷಯ:** ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಚಿಕ್ಕಸಾಗರಹಳ್ಳಿ ಗ್ರಾಮದ ಸ.ನಂ.2/7 ರಲ್ಲಿ 00ಎಕರೆ-38ಗುಂಟೆ, ಸ.ನಂ.2/8 ರಲ್ಲಿ 01ಎಕರೆ-10ಗುಂಟೆ, ಸ.ನಂ.2/10 ರಲ್ಲಿ 01ಎಕರೆ-05ಗುಂಟೆ, ಸ.ನಂ.2/11 ರಲ್ಲಿ 01ಎಕರೆ-02ಗುಂಟೆ, ಸ.ನಂ.2/12 ರಲ್ಲಿ 01ಎಕರೆ-09ಗುಂಟೆ, ಸ.ನಂ.2/13 ರಲ್ಲಿ 00ಎಕರೆ-07ಗುಂಟೆ, ಸ.ನಂ.3/1 ರಲ್ಲಿ 00ಎಕರೆ-13ಗುಂಟೆ, ಸ.ನಂ.3/4 ರಲ್ಲಿ 01ಎಕರೆ-02ಗುಂಟೆ, ಸ.ನಂ.4/3 ರಲ್ಲಿ 00ಎಕರೆ-20ಗುಂಟೆ, ಸ.ನಂ.4/4 ರಲ್ಲಿ 00ಎಕರೆ-34ಗುಂಟೆ, ಸ.ನಂ.4/11 ರಲ್ಲಿ 00ಎಕರೆ-18ಗುಂಟೆ, ಸ.ನಂ.4/12 ರಲ್ಲಿ 00ಎಕರೆ-25ಗುಂಟೆ, ಸ.ನಂ.5/5 ರಲ್ಲಿ 00ಎಕರೆ-14.08ಗುಂಟೆ, ಸ.ನಂ.5/6 ರಲ್ಲಿ 00ಎಕರೆ-17.12ಗುಂಟೆ, ಸ.ನಂ.5/7 ರಲ್ಲಿ 00ಎಕರೆ-17.12ಗುಂಟೆ, ಸ.ನಂ.5/8 ರಲ್ಲಿ 00ಎಕರೆ-17.12ಗುಂಟೆ, ಸ.ನಂ.5/9 ರಲ್ಲಿ 00ಎಕರೆ-17.12ಗುಂಟೆ, ಸ.ನಂ.6/1 ರಲ್ಲಿ 01ಎಕರೆ-01ಗುಂಟೆ, ಸ.ನಂ.6/2 ರಲ್ಲಿ 01ಎಕರೆ-02ಗುಂಟೆ ಹಾಗೂ ಸ.ನಂ.6/3 ರಲ್ಲಿ 00ಎಕರೆ-38ಗುಂಟೆ ಒಟ್ಟು 14ಎಕರೆ-34.04 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ವಸತಿ ಮತ್ತು ವಾಣಿಜ್ಯ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**

1. ಅರ್ಜಿದಾರರ ಮನವಿ ದಿನಾಂಕ:27.07.2016.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.122/2013-14 ದಿನಾಂಕ:09.01.2014,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.619/2013-14 ದಿನಾಂಕ:04.03.2014,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.124/2013-14 ದಿನಾಂಕ:10.12.2013,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.118/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.123/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.195/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.126/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.125/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.127/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.19/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.128/2013-14,
   ಎಎಲ್ಎನ್.ಎಸ್.ಆರ್.(ಚಿ).ಸಕಾಲ.120/2013-14 ಮತ್ತು

ಎಎಲ್‌ಎನ್.ಎಸ್.ಆರ್.(ಚಿ).ಸಕಾಲ.121/2013-14 ದಿನಾಂಕ:13.12.2013,

3. ದಿನಾಂಕ:10.09.2024 ರಂದು ನಡೆದ ಪ್ರಾಧಿಕಾರದ 36ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:26 ರ ನಿರ್ಣಯ.
4. ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 24 ಶಾಸನ 2015 ಬೆಂಗಳೂರು ದಿನಾಂಕ:10.09.2015.
5. ಅರ್ಜಿದಾರರು ಶುಲ್ಕ ಪಾವತಿಸಿರುವ ದಿನಾಂಕ:21.10.2024, ಪ್ರಾಧಿಕಾರದ ರಶೀದಿ ಸಂಖ್ಯೆ:1052 ದಿನಾಂಕ:23.10.2024.
6. ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರ ದಿನಾಂಕ:28.11.2024.

*******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ಮೆ॥ ಸರ್ಟೈನ್ಮೆಂಟ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಜಯ್ ವೈ.ಡಿ., ಬಾಲಸುಬ್ರಹ್ಮಣ್ಯಂ ರಾಮಚಂದ್ರನ್ ಮತ್ತು ಮಾಧವಿ ಚೆಲಕಂ ಇವರುಗಳು ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಚಿಕ್ಕಸಾಗರಹಳ್ಳಿ ಗ್ರಾಮದ ಸ.ನಂ.2/7 ರಲ್ಲಿ 00ಎಕರೆ-38ಗುಂಟೆ, ಸ.ನಂ.2/8 ರಲ್ಲಿ 01ಎಕರೆ-10ಗುಂಟೆ, ಸ.ನಂ.2/10 ರಲ್ಲಿ 01ಎಕರೆ-05ಗುಂಟೆ, ಸ.ನಂ.2/11 ರಲ್ಲಿ 01ಎಕರೆ-02ಗುಂಟೆ, ಸ.ನಂ.2/12 ರಲ್ಲಿ 01ಎಕರೆ-09ಗುಂಟೆ, ಸ.ನಂ.2/13 ರಲ್ಲಿ 00ಎಕರೆ-07ಗುಂಟೆ, ಸ.ನಂ.3/1 ರಲ್ಲಿ 00ಎಕರೆ-13ಗುಂಟೆ, ಸ.ನಂ.3/4 ರಲ್ಲಿ 01ಎಕರೆ-02ಗುಂಟೆ, ಸ.ನಂ.4/3 ರಲ್ಲಿ 00ಎಕರೆ-20ಗುಂಟೆ, ಸ.ನಂ.4/4 ರಲ್ಲಿ 00ಎಕರೆ-34ಗುಂಟೆ, ಸ.ನಂ.4/11 ರಲ್ಲಿ 00ಎಕರೆ-18ಗುಂಟೆ, ಸ.ನಂ.4/12 ರಲ್ಲಿ 00ಎಕರೆ-25ಗುಂಟೆ, ಸ.ನಂ.5/5 ರಲ್ಲಿ 00ಎಕರೆ-14.08ಗುಂಟೆ, ಸ.ನಂ.5/6 ರಲ್ಲಿ 00ಎಕರೆ-17.12ಗುಂಟೆ, ಸ.ನಂ.5/7 ರಲ್ಲಿ 00ಎಕರೆ-17.12ಗುಂಟೆ, ಸ.ನಂ.5/8 ರಲ್ಲಿ 00ಎಕರೆ-17.12ಗುಂಟೆ, ಸ.ನಂ.5/9 ರಲ್ಲಿ 00ಎಕರೆ-17.12ಗುಂಟೆ, ಸ.ನಂ.6/1 ರಲ್ಲಿ 01ಎಕರೆ-01ಗುಂಟೆ, ಸ.ನಂ.6/2 ರಲ್ಲಿ 01ಎಕರೆ-02ಗುಂಟೆ ಹಾಗೂ ಸ.ನಂ.6/3 ರಲ್ಲಿ 00ಎಕರೆ-38ಗುಂಟೆ ಒಟ್ಟು 14ಎಕರೆ-34.04 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಮತ್ತು ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಉಲ್ಲೇಖ(2) ರಂತೆ ಸದರಿ ಜಮೀನುಗಳು ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಉಲ್ಲೇಖ(3) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಹಾಗೂ ಉಲ್ಲೇಖ(4) ರನ್ವಯ ಸದರಿ ಜಮೀನುಗಳಿಗೆ ತಾತ್ಕಾಲಿಕ ವಸತಿ ಮತ್ತು ವಾಣಿಜ್ಯ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಉಲ್ಲೇಖ(5) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕ ಹಾಗೂ ಸೆಸ್‌ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಉಲ್ಲೇಖ(6) ರಲ್ಲಿ ಅರ್ಜಿದಾರರು ಸದರಿ ಜಮೀನುಗಳಲ್ಲಿ ಯಾವುದೇ ತಂಟೆ-ತಕರಾರು, ದೂರುಗಳು, ನ್ಯಾಯಲಯದಲ್ಲಿ ದಾವೆಗಳು, ಲೋಕಾಯುಕ್ತ ಪ್ರಕರಣಗಳು, ಡಿಕ್ರಿ ಇತರೆ ಯಾವುದೇ ಪ್ರಕರಣಗಳು ಇರುವುದಿಲ್ಲ ಪ್ರಮಾಣ ಪತ್ರವನ್ನು ದೃಢೀಕರಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ತಾತ್ಕಾಲಿಕ ವಸತಿ ಮತ್ತು ವಾಣಿಜ್ಯ ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ, ವಿನ್ಯಾಸ ನಕ್ಷೆಯ ಭೂ-ಉಪಯೋಗ ವಿಶ್ಲೇಷಣೆಯಲ್ಲಿ **ವಸತಿಗಾಗಿ 26,505.28ಚ.ಮೀ ಹಾಗೂ ವಾಣಿಜ್ಯ 1,220.82ಚ.ಮೀ.(48.46%), ಉದ್ಯಾನವನ 12,186.84ಚ.ಮೀ.(21.30%) ಮತ್ತು ರಸ್ತೆಗಾಗಿ 17,298.69ಚ.ಮೀ.(30.24%)** ವಿಸ್ತೀರ್ಣಗಳೊಂದಿಗೆ **9.14ಮೀx15.24ಮೀ ಅಳತೆಯ 14 ನಿವೇಶನಗಳು, 12.19ಮೀx18.29ಮೀ ಅಳತೆಯ 18 ನಿವೇಶನಗಳು, 15.24ಮೀx24.38ಮೀ ಅಳತೆಯ 21 ನಿವೇಶನಗಳು, ವಾಣಿಜ್ಯ ಅಳತೆಯ ನಿವೇಶನ 01 ಮತ್ತು** ಅನಿಯತ ಅಳತೆಯ **63 ನಿವೇಶನಗಳು ಒಟ್ಟು 117 ನಿವೇಶನಗಳನ್ನು** ಅಳವಡಿಸಿ ಸದರಿ ಜಮೀನುಗಳಿಗೆ ತಾತ್ಕಾಲಿಕ ವಸತಿ ಮತ್ತು ವಾಣಿಜ್ಯ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

--2

<u>ಷರತ್ತುಗಳು:</u>

1. ಈಗ ನೀಡಿರುವ ತಾತ್ಕಾಲಿಕ ವಸತಿ ಮತ್ತು ವಾಣಿಜ್ಯ ವಿನ್ಯಾಸ ನಕ್ಷೆಯ ಅನುಮೋದನೆಯ ದಿನಾಂಕದಿಂದ 2 ವರ್ಷಗಳೊಳಗೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. **ಪ್ರಾಧಿಕಾರವು ಅನುಮೋದಿಸಿದ ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಭೂ ಮಾಲೀಕರು/ಅರ್ಜಿದಾರರು/ ಅಭಿವೃದ್ಧಿದಾರರು ವಿನ್ಯಾಸದಲ್ಲಿರುವಂತೆ ರಸ್ತೆ ಮತ್ತು ಉದ್ಯಾನವನ ಜಾಗೆಗಳನ್ನು ಭೂಮಿಯ ಮೇಲೆ ಅಳವಡಿಸಿ ವಿನ್ಯಾಸ ನಕ್ಷೆಯನ್ನು ನಾಮಫಲಕದಲ್ಲಿ ಪ್ರಕಟಿಸಿ ರಸ್ತೆ ಹಾಗೂ ಉದ್ಯಾನವನ ಜಾಗೆಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಪ್ಪಹಳ್ಳಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ಯಾವುದೇ ಫಲಾಪೇಕ್ಷೆಯಿಲ್ಲದೇ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯೇಜನ ಪತ್ರದ ಮೂಲಕ ಹಸ್ತಾಂತರಿಸತಕ್ಕದ್ದು.**
3. **ರಿಯಲ್ ಎಸ್ಟೇಟ್ (ವಿನಿಮಯ ಮತ್ತು ಅಭಿವೃದ್ಧಿ) ಅಧಿನಿಯಮ 2016 ರ (2016 ರ ಕೇಂದ್ರ ಅಧಿನಿಯಮ16) ಅಡಿಯಲ್ಲಿ ಯೋಜನೆಯನ್ನು ನೋಂದಾಯಿಸತಕ್ಕದ್ದು.**
4. ವಿನ್ಯಾಸದಲ್ಲಿ ಲಘು ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಸೂಕ್ತ ಜಾಗಕ್ಕೆ ಅಥವಾ ರಸ್ತೆ ಬದಿಗೆ ಸ್ಥಳಾಂತರಿಸತಕ್ಕದ್ದು ಹಾಗೂ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಈ ಕಚೇರಿಗೆ ಸಲ್ಲಿಸತಕ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
6. ವಿನ್ಯಾಸದ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳಸತಕ್ಕದ್ದು.
7. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
8. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ರೀತಿ ನಿರ್ಬಂಧಿಸತಕ್ಕದ್ದಲ್ಲ.
10. ವಿನ್ಯಾಸ ಅಭಿವೃದ್ಧಿಪಡಿಸುವಾಗ ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿರುವ ಜಾಗಗಳನ್ನು ಅನುಮೋದಿತ ವಿನ್ಯಾಸದಂತೆ ಅಭಿವೃದ್ಧಿಪಡಿಸಬೇಕು.
11. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಈ ಪ್ರಾಧಿಕಾರದ ನಕ್ಷೆ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲಿಕತ್ವ ದಾಖಲೆ ಮತ್ತು ಇತರೆ ಯಾವುದೇ ದಾಖಲೆ/ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇತಾನಾಗಿ ರದ್ದುಗೊಳ್ಳುತ್ತದೆ.

--3

13. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot path) ನಿರ್ಮಿಸುವುದು.
14. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.
15. ವಿನ್ಯಾಸದಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸುವಾಗ ಸರ್ವೋಚ್ಚ ನ್ಯಾಯಾಲಯವು ದಿನಾಂಕ:06.07.2010 ರಂದು ನೀಡಿರುವ ಆದೇಶದನ್ವಯ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪ್ರಮಾಣ ಪತ್ರ ಪಡೆಯತಕ್ಕದ್ದು.
16. ವಿನ್ಯಾಸದ ಅನುಮೋದನೆಯಲ್ಲಿ ವಿಧಿಸಿರುವ ಯಾವುದೇ ಷರತ್ತುಗಳನ್ನು ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.
17. ಸದರಿ ವಿನ್ಯಾಸದ ಸುತ್ತಲೂ ಕಾಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳ ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.
18. ತಾತ್ಕಾಲಿಕ ಅನುಮೋದಿಸಿದ ವಸತಿ ಮತ್ತು ವಾಣಿಜ್ಯ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಂಡಿಗಳು ಮತ್ತು ಮಳೆ ನೀರು ಸಂಗ್ರಹಣೆಗಳನ್ನು ಗುರುತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯಲ್ಲಿ ಅಳವಡಿಸಿಕೊಳ್ಳತಕ್ಕದ್ದು ಹಾಗೂ ಅಂತರ್ಜಲವೃದ್ಧಿಗೆ ಅಗತ್ಯಕ್ರಮ ವಹಿಸುವುದು.

ವಿನ್ಯಾಸ ಅನುಮೋದನೆಯ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ಗಮನಕ್ಕೆ ತರಲಾಗಿದೆ.

ಸಹಿ/-
ಆಯುಕ್ತರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಬಳ್ಳಾಪುರ.

ಯಥಾ ಪ್ರತಿಯನ್ನು:-

1. ಅರ್ಜಿದಾರರಾದ/ಅಭಿವೃದ್ಧಿದಾರರು ಮೆ॥ ಸರ್ಟೈನೈಂಟ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಜಯ್ ವೈ.ಡಿ., ಬಾಲಸುಬ್ರಹ್ಮಣ್ಯಂ ರಾಮಚಂದ್ರನ್ ಮತ್ತು ಮಾಧವಿ ಚಿಲಕಂ, ಬೆಂಗಳೂರು ಗ್ರಾಮಾಂತರ ಇವರಿಗೆ ಮಾಹಿತಿಗಾಗಿ ನೀಡುತ್ತಾ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ **ಪ್ರಶ್ನಿತ ಜಮೀನಿಗೆ ಇರುವ ರಸ್ತೆಯ ವರ್ಗೀಕರಣವನ್ನು ಪರಿಶೀಲಿಸತಕ್ಕದು** ಮತ್ತು ಸದರಿ ವಿನ್ಯಾಸದಲ್ಲಿ ಬರುವ ಸಿವಿಲ್ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಹಾಗೂ ಬಡಾವಣೆಯ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಇಲಾಖೆಯ ಮಾರ್ಗದರ್ಶನದಂತೆ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.

--4

3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸದಲ್ಲಿ ಬರುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಇಲಾಖೆಯ ಮಾರ್ಗದರ್ಶನದಂತೆ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್), ಗ್ರಾಮೀಣ/ನಗರ ಉಪವಿಭಾಗ, ಬೆಸ್ಕಾಂ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ **ಸದರಿ ಜಮೀನಿನಲ್ಲಿ ಯಾವುದಾದರು ಹೊಸ ವಿದ್ಯುತ್ ಮಾರ್ಗಗಳು ಹಾದುಹೋಗುವ ಪ್ರಸ್ತಾವನೆಗಳಿದ್ದಲ್ಲಿ ಸದರಿ ಮಾಹಿತಿ / ದಾಖಲಾತಿಗಳನ್ನು ಸಲ್ಲಿಸುವಂತೆ** ಹಾಗೂ ಸದರಿ ವಿನ್ಯಾಸದಲ್ಲಿ ಬರುವ ವಿದ್ಯುತ್ ಸರಬರಾಜು ಕಾಮಗಾರಿಗಳ ಬಗ್ಗೆ ಇಲಾಖೆಯ ಮಾರ್ಗದರ್ಶನದಂತೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಮಾರ್ಗದರ್ಶನ ನೀಡಿ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
5. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸುತ್ತಾ, ಸದರಿ ವಿನ್ಯಾಸದಲ್ಲಿ ಬರುವ ಉದ್ಯಾನವನ ಮತ್ತು ರಸ್ತೆ ಬದಿಗಳಲ್ಲಿ ಸಸಿಗಳನ್ನು ಬೆಳೆಸುವ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಸ್ಥಳ ಪರಿಶೀಲಿಸಿ ಮಾರ್ಗದರ್ಶನ ನೀಡಿ ಅಭಿವೃದ್ಧಿಪಡಿಸಿದ ನಂತರ ತೃಪ್ತಿಕರವಾಗಿದ್ದಲ್ಲಿ ದೃಢೀಕರಣ ಪತ್ರ ನೀಡುವಂತೆ ತಿಳಿಸಲಾಗಿದೆ.
6. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಪ್ಪಹಳ್ಳಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕೆ.

29/11/2024

ಆಯುಕ್ತರು

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ

ಚಿಕ್ಕಬಳ್ಳಾಪುರ.

28/11/2024